**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 28.06.2025**

**ಪಾಟೀ ಸವಾಲುಃ ಪ್ರತಿವಾದಿ 3 ಪರ ವಕೀಲರಿಂದ ಶ್ರೀ ಎನ್ ಎಲ್ ವಕೀಲರಿಂದ**

ನನ್ನ ತಾತನ ಹೆಸರು ಲಿಂಗರಾಜಯ್ಯ ಎಂದರೆ ಸರಿ . ಅವರು ಶಾಸಕರಾಗಿ ಆಯ್ಕೆಯಾಗಿದ್ದರು ಎಂದರೆ ಸರಿ . ದಾವಾ ಸರ್ವೆ ನಂ **2/34** ಪಿ**1** **8** ಎಕರೆ **10** ಸೆಂಟ್ಸ ಮೂಲತಃ ನನ್ನ ತಾತ ಲಿಂಗರಾಜಯ್ಯರವರಿಗೆ ಸೇರಿದ್ದು ಎಂದರೆ ಸರಿ . ಸದರಿ ಸ್ವತ್ತು ಲಿಂಗರಾಜಯ್ಯರವರು ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ನನ್ನ ತಾತ ಸದರಿ ಸ್ವತ್ತನ್ನು ಅವರ ಸಂಪಾದನೆಯಿುಂದ ಕ್ರಯಕ್ಕೆ ಪಡೆದ ಸ್ವತ್ತು ಎಂದರೆ ಸರಿಯಲ್ಲ. ನಾನು ಸದರಿ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ನಿಪಿ **4** ನನ್ನ ತಾತನ ಹೆಸರಿಗೆ ಆದ ಕ್ರಯ ಪತ್ರ ಎಂದರೆ ಸರಿ. ನಿಪಿ **4** ಆದಂತಹ ಸಂದರ್ಬದಲ್ಲಿ ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಯಾರೂ ಹುಟ್ಟಿರಲಿಲ್ಲ ಎಂದರೆ ಸರಿ . ಲಿಂಗರಾಜಯ್ಯರವರ ದಾವಾ ಸರ್ವೆ ನಂ **2/34** ಪಿ**1** ಅವರ ಸ್ವಯಾರ್ಜಿತ ಸ್ವತ್ತಾದ ಕಾರಣ ಅವರು ಯಾರಿಗಾದರೂ ವರ್ಗಾವಣೆ ಮಾಡಲು ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಿಃ **19.09.1990** ರಂದು ಲಿಂಗರಾಜಯ್ಯರವರು ನನ್ನ ಸಹೋದರರಿಗೆ ಮರಣ ಶಾಸನ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ .

**1** ನೇ ಪ್ರತಿವಾದಿ ಮತ್ತು ನನ್ನ ತಾಯಿ ಕಮಲಮ್ಮ ಮತ್ತು **3** , **4** ನೇ ಪ್ರತಿವಾದಿ ಮತ್ತು ಅಶೋಕರವರು ಒಟ್ಟು ಕುಟುಂಬದ ಸದಸ್ಯರಾಗಿ ದಾವಾಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ . ನಾನು **1970** ನೆ ಇಸ್ವಿಯಲ್ಲಿ ಜನಿಸಿರುತ್ತೇನೆ ಎಂದರೆ ಸರಿ . ನನ್ನ ತಾತ ದಾವಾಸ್ವತ್ತನ್ನು

**1958** ರಲ್ಲಿ ಕ್ರಯಕ್ಕೆ ಪಡೆದರು ಎಂದರೆ ಸರಿ. ನನ್ನ ತಾತ ಸದರಿ ದಾವಾಸ್ವತ್ತನ್ನು ನಾನು ಜನಿಸಿರುವ ಮುಂಚೆಯೆ ಕ್ರಯಕ್ಕೆ ಪಡೆದ ಕಾರಣ ನನಗೆ ಅದರಲ್ಲಿ ಯಾವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಮತ್ತು ನನ್ನ ಚಿಕ್ಕ ತಾತ **1974** ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ವಿಭಾಗ ಮಾಡಿಕೊಂಡರು ಎಂದರೆ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ . ಆ ರೀತಿ ನಾನು ಯಾವುದೆ ವಿಭಾಗ ಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಅವರ ಜೀವಿತಾವಧಿಯಲ್ಲಿ ನನ್ನ ಸಹೋದರರಿಗೆ ಮರಣ ಶಾಸನ ಪತ್ರವನ್ನು ಬರೆದುಕೊಟ್ಟ ಕಾರಣ ಅವರೇ ಆ ಆಸ್ತಿಯ ಮಾಲಿಕರು ಎಂದರೆ ಸಾಕ್ಷಿಯು ನನ್ನ ತಾತ ಆ ರೀತಿ ಮರಣ ಶಾಸನ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದು ನುಡಿದರು .

ಸದರಿ ದಾವೆಯ ವಾದ ಪತ್ರಕ್ಕೆ ನಾನು ಸಹಿ ಹಾಕಿರುವುದಿಲ್ಲ ನನ್ನ ಸಹಿಯನ್ನು ಫೋರ್ಜರಿ ಮಾಡಿ ನನ್ನ ಅಣ್ಣಂದಿರು ಸಲ್ಲಿಸಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ . ಈ ಸಂಬಂದ ನಾನು ನನ್ನ ಸಹೋದರರ ಮೇಲೆ ಒಂದು ಖಾಸಗಿ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ . **3** ನೇ ಪ್ರತಿವಾದಿಯು ಆ ರೀತಿ ಯಾವುದೆ ಫೋರ್ಜರಿ ಮಾಡಿ ವಾದ ಪತ್ರವನ್ನು ಸಲ್ಲಿಸಿರುವುದಿಲ್ಲ ಅವರ ವಿರುದ್ಧ ಬಿ ಅಂತಿಮ ವರದಿಯನ್ನು ಪೋಲಿಸರು ಸಲ್ಲಿಸಿರುತ್ತಾರೆ ಎಂದರೆ ಸರಿ . ನನಗೆ ಈ ದಾವಾ ಆಸ್ತಿಯ ಮೇಲೆ ಯಾವುದೆ ಹಕ್ಕು ಇರುವುದಿಲ್ಲ ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ನನ್ನ ಸಹೋದರರನ್ನು ಹೊರತುಪಡಿಸಿ ಬೇರೆ ಯಾವುದೆ ಸಹೋದರರಿಗೂ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ